43 (4)

Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 258 | ಸೋಮವಾರ 9—6—47 | ಬಿಡಿ ಪ್ರತಿ 6 ಪೈ

ಪ್ರ. ಪ್ರ. ಸಭೆ ಜೆಂ. ಜೂ ೭

(ಸ್ವಂತ ವಿಶೇಷ ಪ್ರತಿನಿಧಿಯಿಂದ)

ಪಾಕೀಸ್ತಾನಕ್ಕೆ ಮೈಸೂರು ಸೇರುವುದಿಲ್ಲ ?

ಡಾ|| ರಾಯರವರ ಅಧ್ಯಕ್ಷತೆಯಲ್ಲಿ ಈ ದಿವಸ ಸಭೆ 12 ಗಂಟೆಗೆ ಸೇರಿತು.

ಮೈಸೂರು ಸಂಸ್ಥಾನವು ಪಾಕೀಸ್ತಾನಕ್ಕೆ ಸೇರಬೇಕು ಎಂದು ಮೈಸೂರು ಮುಸ್ಲಿಂ ಲೀಗಿನವರು ಸರ್ಕಾರಕ್ಕೆ ಮನವಿಯನ್ನು ಅರ್ಪಿಸಿರುವುದು ನಿಜವೇ ?

ಎಂಬ ಪ್ರಶ್ನೆಯನ್ನು ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಸಭೆಯು ಕಾರ್ಯವನ್ನು ಸಾಗಿಸುತ್ತಿದ್ದಾಗ ಮಧ್ಯೆ ಬಂದು ಕೇಳಿದರು.

'ಇಲ್ಲ' ಎಂಬಷ್ಟು ಮಾತ್ರ ಉತ್ತರವನ್ನು ಅಧ್ಯಕ್ಷ ಡಾ|| ರಾಯರವರು ಕೊಟ್ಟರು.

ಶ್ರೀ ಮರುಳಪ್ಪನವರು ಅಯವ್ಯಯ ಚರ್ಚೆಯಲ್ಲಿ ಭಾಷಣ ಮಾಡಿದಾಗ ಉಪಯೋಗಿಸಿದ ಹಲಕೆಲವು ಪದಗಳು ಸಭಾ ಗೌರವಕ್ಕೆ ಚ್ಯುತಿಯನ್ನು ತಂದಿದೆ ಎಂದು ಶ್ರೀ ರಾಮಪ್ಪನವರು ತಂದಿದ್ದ ಹಕ್ಕಿನ ನಿರ್ಣಯದ ಮೇಲೆ ನಿನ್ನೆಯ ದಿವಸ ಅಧ್ಯಕ್ಷರು ತೀರ್ಪು ಕೊಡುತ್ತಾ ಆಕ್ಷೇಪಾರ್ಹವಾದ ಪದಗಳನ್ನು ಅಧಿಕೃತವರದಿಯಿಂದ ತೆಗೆದು ಬಿಡಲಾಗುವುದು ಎಂದು ಹೇಳಿ ತಿರಸ್ಕರಿಸಿಬಿಟ್ಟರಷ್ಟೇ ! ಆ ವಿಷಯದ ಮೇಲೆ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಜೋಯಿಸ್ ಮಂಡಿಸಿದ ಹಕ್ಕಿನ ನಿರ್ಣಯವನ್ನು ಅಧ್ಯಕ್ಷರು ನಿರಾಕರಿಸುತ್ತಾ ಆ ನಿರ್ಣಯ ಅಧ್ಯಕ್ಷರ ತೀರ್ಪನ್ನು ಪ್ರಶ್ನಿಸುವಂತಿದೆ ಎಂದು ಹೇಳಿದರು.

- ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಭದ್ರಾವತಿ ಕಬ್ಬಿಣ ಕಾರ್ಖಾನೆ ಕೆಲಸಗಾರರ ಬಗ್ಗೆ ಸ್ಟೈಕ್ ಬ್ಯಾಲೆಟ್‌ನ್ನು ಲೇಬರ್ ಅಸಿಸ್ಟೆಂಟ್ ಕಮಿಷನರು ತೆಗೆದುಕೊಳ್ಳದೆ ಇರುವ ಬಗ್ಗೆ ಮಂಡಿಸಿದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ಸಭೆಯಲ್ಲಿ ಅಂಗೀಕರಿಸಲಿಲ್ಲ.

ಅಯವ್ಯಯ ನಿರ್ಣಯ

1) ಶ್ರೀ ಬಿ. ಎಸ್ ಗುಪ್ತ – ಪೋಲೀಸು ಇಲಾಖೆಯಲ್ಲಿ ಅವಶ್ಯಕವಾದ ಸುಧಾರಣೆಗಳನ್ನು ಮಾಡಿ ಲಂಚರುಷುವತ್ತುಗಳನ್ನು ಪರಿಶೀಲಿಸುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕಮಾಡುವುದಕ್ಕಾಗಿ ಸಾಕಷ್ಟಾದಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕೆಂದು ಈ ಸಭೆಯ ಅಭಿಪ್ರಾಯವು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಲಹೆ ಮಾಡುತ್ತಾರೆ.

ಮಾನ್ಯ ಸದಸ್ಯರನೇಕರು ಉಜ್ವಲ ಭಾಷಣ ಮಾಡಿದರು. ಸರ್ಕಾರದ ಪರವಾಗಿ ಶ್ರೀ ವೇದವ್ಯಾಸಾಚಾರ್ಯರು ಉತ್ತರವಿತ್ತು ಸಮಿತಿ ಬೇಡವೆಂದರು. ನಿರ್ಣಯ ಬಹುಮತದಿಂದ ಅಂಗೀಕೃತವಾಯಿತು.

2) ಶ್ರೀ ಎ. ಶಂಕರಲಿಂಗೇಗೌಡ – ನಾಗಮಂಗಲ ತಾಲ್ಲೂಕಿನಲ್ಲಿ ತಲಾ 10 ಸೇರು ಅಕ್ಕಿಯಾಗುವಂತೆ ಲೆಕ್ಕವಾಗುವಷ್ಟು ಒತ್ತ ಮಾತ್ರ ಬೆಳೆಯುತ್ತದೆ. ಆ ತಾಲ್ಲೂಕಿನಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸುವ ಸಲುವಾಗಿ ಬೊಮ್ಮಿಡಿ ಹಳ್ಳಿಕೆರೆ, ಲೋಕಪಾವನಿ ಪ್ರಾಜೆಕ್ಟ್ ವಗೈರೆ ಗಂಗವಾಡಿ ಅಣೆಕಟ್ಟು – ಇವುಗಳನ್ನು ಕಾವುಗಾರರಿಗಳನ್ನು ಕೈಗೊಳ್ಳಲು ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕೆಂದು ಈ ಸಭೆಯು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಲಹೆ ಮಾಡುತ್ತಾರೆ.

ಸದಸ್ಯ ಮಹನೀಯರನೇಕರು ಈ ವಿಷಯ ಬರೂರು ಎಂದು ಭಾಷಣದಲ್ಲಿ ತಿಳಿಸಿದರು. ಈ ಬಗ್ಗೆ ಪುನರ್ವಿಮರ್ಶೆ ಮಾಡುತ್ತೇವೆ ಎಂದು ಸರ್ಕಾರದ ಪರವಾಗಿ ಶ್ರೀ ಪಾರ್ಥಸಾರಥಿಯವರು ತಿಳಿಸಿದರು. ಬಹುಮತದಿಂದ ನಿರ್ಣಯ ಅಂಗೀಕೃತವಾಯಿತು

——

ಬಟಾವಿಯಾ — ಸುಮಾತ್ರಾವು ಸ್ವಾಂತ್ಯಗಳಾಗಿ ವಿಂಗಡಿಸಲ್ಪಡುವುದೆಂದು ಹೇಳಲಾಗಿದೆ

ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ಪ್ರಶ್ನೆ

ತಿರುಪತಿ ದೇವಾಲಯ

ಮದರಾಸು ಜೂ 7 — ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶಕ್ಕೆ ನಿರ್ಬಂಧಿಸಿ ಹೈಕೋರ್ಟಿನವರು ಕೊಟ್ಟರುವ ಇಂಜಂಕ್ಷನ್ ಆಜ್ಞೆಯನ್ನು ಹೊಸ ಶಾಸನಕ್ಕೆ ಅನುಸರಣೀಯವಾಗಿರದ್ದು ಪಡಿಸಬೇಕೆಂದು ದೇವಸ್ಥಾನ ಕಮಿಟಿಯವರು ಹಾಕಿರುವ ಅರ್ಜಿ ಮೇಲೆ ವಾದವಿವಾದ ನಡೆದು ತೀರ್ಪು ಮುಂಗಳವಾರ ಕೊಡಲ್ಪಡುವುದೆಂದು ತಿಳಿಯಬಂದಿದೆ.

ತಾತ್ಕಾಲಿಕ ಮಂತ್ರಿಗಳ ರಾಜೀನಾಮೆ !

ನವದೆಹಲಿ ಜೂ 8— ತಾತ್ಕಾಲಿಕ ಮಂತ್ರಿಮಂಡಲದ ಸದಸ್ಯರು ಮುಂದಿನವಾರ ತಮ್ಮ ರಾಜೀನಾಮೆಯನ್ನು ವೈಸರಾಯರಿಗೆ ಸಲ್ಲಿಸುವರೆಂದು ಹೇಳಲಾಗಿದೆ. ಪಾಕಿಸ್ತಾನ, ಹಿಂದೂಸ್ಥಾನದ ಎರಡೂ ಮಂತ್ರಿಮಂಡಲ ಸ್ಥಾಪನೆಗಾಗಿ ಈ ರಾಜೀನಾಮೆ ಕೇಳಲಾಗಿದೆಯಂತೆ.

ಪ್ರಾಣಿವಧೆ ನಿಂತಿತು

ತುಮಕೂರು ಟೌನಿನ ದೊಡ್ಡಪೇಟೆಯಲ್ಲಿ ಶ್ರೀ ದುರ್ಗಾದೇವಿ ಜಾತ್ರೆಯಲ್ಲಿ ಕೋಣ ಕುರಿಗಳನ್ನು ವಧೆ ಮಾಡದೆಂದು ತುಮಕೂರು ಮುಂಡಿ ವರ್ತಕ ಮಹಾಶಯರ ಸಹಾಯದಿಂದಲೂ ಪೋಲೀಸು ಅಧಿಕಾರಿಗಳ ಸಹಾಯದಿಂದಲೂ ಪ್ರಾಣಿಬಲಿಯನ್ನು ನಿಲ್ಲಿಸಿ ಸಾತ್ವಿಕ ಧರ್ಮದಿಂದ ಜಾತ್ರೆ ನಡೆಯುವಂತೆ ಮಾಡಿಸಲಾಯಿತು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಆರೋಗ್ಯವುಂಟು. ಮನಶ್ಶಾಂತಿಯುಂಟು. ಮಿತ್ರರ ಆಗಮನ ವುಂಟು.

ವೃಷಭ — ಚಿಂತೆ ಅಸಮಾಧಾನ ಹೆಚ್ಚಬಹುದು. ಕೆಲವು ವಿಷಯಗಳಲ್ಲಿ ಹೆದರಿಕೆಯಾಗಬಹುದು. ವ್ಯವಹಾರದಲ್ಲಿ ಸಂತೋಷವಿರುವುದಿಲ್ಲ.

ಮಿಥುನ—ಶತ್ರುಗಳ ಭಯವು ಕಾಣಬರುತ್ತದೆ. ಮನಸ್ಸಿಗೆ ಆನಂದವಿರುತ್ತದೆ. ವ್ಯವಹಾರದಲ್ಲಿ ಅಭಿವೃದ್ಧಿಯುಂಟು.

ಕಟಕ — ವೈರಿಗಳು ಹೆಚ್ಚಾಗಿರುತ್ತಾಗಲಿ ನಿಮ್ಮನ್ನೇನೂ ಮಾಡಲಾರರು. ವ್ಯವಹಾರದಲ್ಲಿ ಜವಾಬ್ದಾರಿ ಹೆಚ್ಚು.

ಸಿಂಹ — ಆರ್ಥಿಕ ಲಾಭವುಂಟು. ಅಪೇಕ್ಷೆಗಳ ಭೇಟಿಯಾಗುತ್ತದೆ. ವ್ಯವಹಾರದಲ್ಲಿ ಅನುಕೂಲವುಂಟು.

ಕನ್ಯಾ — ಅತಿ ಆಶೆ ಬೇಡ – ದುಂದುಗಾರಿಕೆ ಬೇಡ. ಗೃಹಕೃತ್ಯದಲ್ಲಿ ವಿರೋಧವು ಕಾಣಬರುತ್ತದೆ.

ತುಲ — ವ್ಯವಹಾರಕ್ಕೆ ಸುಕಾಲ ಧನಲಾಭವುಂಟು ಆರೋಗ್ಯವುಂಟು. ಮಹತ್ವ ಕಾರ್ಯದಲ್ಲಿ ಜಯ.

ವೃಶ್ಚಿಕ — ಆರ್ಥಿಕ ಮಾನಸಿಕ ಶಾರೀರಿಕ ಸ್ಥಿತಿಗಳು ಉತ್ತಮವಾಗಿರುವದಿಲ್ಲ. ಬಂಧುಗಳಲ್ಲಿ ಮನಸ್ತಾಪ

ಧನಸ್ಸು — ಆದಾಯವುಂಟು. ಆ ಆದಾಯವು ಮಿತ್ರರಿಗಾಗಿ ವಿನಿಯೋಗವಾಗುತ್ತದೆ. ಗೃಹಕೃತ್ಯದಲ್ಲಿ ಸ್ವಲ್ಪ ಮನೋ ಚಿಂತೆ.

ಮಕರ — ಕಾರ್ಯಸಿದ್ಧಿಯಾಗುತ್ತದೆ. ವ್ಯವಹಾರದಲ್ಲಿ ಮಿತ್ರರ ಸಹಾಯವಿರುತ್ತವೆ. ಆರೋಗ್ಯವು ಉತ್ತಮವಾಗಿರುತ್ತದೆ.

ಕುಂಭ — ಕಾರ್ಯ ಜಯ, ಧನ ಲಾಭ ಶತ್ರುನಾಶ. ಅಧಿಕಾರದಲ್ಲಿ ಅಭಿವೃದ್ಧಿ.

ಮೀನ — ಅಸೂಯಾ ಪರರನ್ನು ಗುರ್ತಿಸಿ ಅವರನ್ನು ಹತ್ತಿರ ಸೇರಿಸಬೇಡಿ. ಸಂಪಾದನೆ ಸಾಧಾರಣ.

——

ಲಂಡನ್ ಪಾರ್ಲಿಮೆಂಟಿನ ಭವನದಲ್ಲಿನ ಸಡಿಲಾರಿಗಳಿಗಾಗಿ 2 ಮೈಲಿ ಉದ್ದವಾಗುವುದೆಂದು ಹೇಳಲ್ಪಟ್ಟಿದೆ.

ಹರಾಜು ನೋಟೀಸು

1947 ನೇ ಇಸವಿ ಜೂಲೈ ತಿಂಗಳ 21 ನೇ ತಾರೀಖು ಮತ್ತು 22 ನೇ ತಾರೀಖುಗಳಲ್ಲಿ ಅರಮನೆ ಗ್ಯಾರೇಜಿನಲ್ಲಿ ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ಒಳ್ಳೆಯ ಸ್ಥಿತಿಯಲ್ಲಿರುವ ಅನೇಕ ಮೋಟಾರು ಕಾರುಗಳೂ, ಬಸ್ಸುಗಳೂ ಮತ್ತು ಲಾರಿಗಳೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ವಿವರಗಳಿಗೆ ತಾಯಿನಾಡು ಮತ್ತು ಜನವಾಣಿಯಲ್ಲಿ 1947 ನೇ ಜೂನ್ 7 ಮತ್ತು 14 ನೇ ತಾರೀಖು ಪ್ರಕಟವಾಗುವ ಜಾಹಿರಾತನ್ನು ದಯವಿಟ್ಟು ನೋಡಿ,

ಸೂಪರಿಂಟಿಂಡೆಂಟ್
ಪ್ಯಾಲೇಸ್ ಗ್ಯಾರೇಜ್
ಮೈಸೂರು.

ಚಿತ್ರಕೂಟದ
ಗೂರಲು ನಿವಾರಣಾ ಬೂತಿ

ಚಿತ್ರಕೂಟದ ಗೂರಲು ನಿವಾರಣಾ ಬೂತಿಯು ಅತ್ಯಂತ ಶಕ್ತಿಯುತವಾದ ಬಹಳ ಗುಣಕಾರಿಯಾದ ಮತ್ತು ಲೋಕ ವಿಖ್ಯಾತವಾದುದು ಆಗಿದೆ ಒಂದೇ ಸಾರಿಯ ಸೇವನೆಯಿಂದ ಗೂರಲು ರೋಗವನ್ನು ಪೂರ್ಣವಾಗಿ ನಿವಾರಣೆ ಮಾಡುವುದು. ತಾ|| 3-7-47 ನೇ ಪೂರ್ಣವಿ ದಿವಸ ತೆಗೆದುಕೊಳ್ಳಬೇಕು. ಪತ್ರವ್ಯವಹಾರ ಇಂಗ್ಲೀಷಿನಲ್ಲಿ, ವಿಳಾಸ ಸ್ಪಷ್ಟವಾಗಿರಲಿ.

Manager
Mahatma Naga Baba Ayurved Ashram
P.O. Chitrakot (U.P.)

OFFICE OF THE PRESIDENT
CITY MUNICIPAL COUNCIL
MYSORE, Dated 3-6-46

Notification

Applications are invited for the post of a clock winder for the maintenance of the Tower & Office Clocks of the City Municipality, Mysore. Only those who are specialists in this field need apply with copies of Testimonials etc. on or before 15 th June 1947, stating the minimum remuneration expected.

K. G. KATWEY
For President

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..
Malleswaram P. O. Bangalore

ಮಹಾಜನರ ಕೋರಿಕೆಯಂತೆ ಪ್ರತಿದಿನ ೩-೩೦ ಕ್ಕೆ ಮ್ಯಾಟ್ನಿ

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ|| **8-6-47** ರಿಂದ ಅಮೋಘ **6** ನೇ ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು
* ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

At Opera

8 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮೂಲ ತಿ ರಾಮಚಂದ್ರ ನಟಿಸಿರುವ

ಗಾ ಜ ಕು ಮಾರಿ

(ತ ಮಿ ಳು)

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು, ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಶಾ॥ 9-6-47 ॥ ಶ್ರೀ॥ ನಂ. 39

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾರತವಿಶಾರದ
ಸಂಘದ ಕಾರ್ಯದರ್ಶಿ, ಡೂರ್ವಾಸಪುರಂ, ಶಿವಮೊಗ್ಗ ಜಿಲ್ಲಾ

ಮೈಸೂರು ದೇಶೀಯ ಪಂಡಿತರ ಹದಿಮೂರನೇ ಸಮ್ಮೇಳನ

ಸರ್ವಜಿತ್ ಸಂವತ್ಸರದ ಜೇಷ್ಠ ಶುದ್ಧ ೫ (ತಾ॥ 25-5-47) ದಿವಸ ಶಿವಮೊಗ್ಗಾದಲ್ಲಿ ಮೈಸೂರು ಸೀಮೆಯ ಪಂಡಿತರ ಹದಿಮೂರನೇ ಸಮ್ಮೇಳನವು ಶ್ರೀಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಶ್ರೀಮದಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಬಹು ಯಶಸ್ವಿಯಾಗಿ ನೆರವೇರಿತು.

ಶ್ರೀ ಶ್ರೀಗಳವರ ಪುರವಣಿಗೆಯು ಚಿಕ್ಕ ಬ್ರಾಹ್ಮಣ ಕೇರಿಯಿಂದ ದೊಡ್ಡ ಪೇಟೆಯ ಮಾರ್ಗವಾಗಿ ಕರ್ಣಾಟಕ ಸಂಘದ ಸಭಾಮಂದಿರಕ್ಕೆ ಮಹಾ ವೈಭವೋಪೇತವಾದ ಸಡಗರದಿಂದ ಬಂದಿತು. ಶ್ರೀಮಠ ಮೈಸೂರು ಸಂಸ್ಥಾನದ ರಕ್ಷಣಾ ಸಚಿವರಾದ ಶ್ರೀಮಾನ್ ಎಂ. ಶೇಷಾದ್ರಿಯವರು ಶ್ರೀ ಶ್ರೀಗಳವರಿಗೆ ಹಾರತುರಾಯಿಗಳನ್ನು ಅರ್ಪಿಸಿ ಸ್ವಾಗತಿಸಿದರು.

ಶ್ರೀ ಶ್ರೀಗಳವರು ಅಧ್ಯಕ್ಷ ಸಿಂಹಾಸನದಲ್ಲಿ ಮಂಡಿಸಿದ ನೇರಳೆ ಸಮ್ಮೇಳನದ ಕಾರ್ಯವು ಆರಂಭವಾಯಿತು. ಶ್ರೀಮಾನ್ ಅಡ್ವೊಕೇಟ್ ಬಿ. ಗರುಡಾಚಾರ್ಯರವರ ಸ್ವಾಗತಾಧ್ಯಕ್ಷ ಭಾಷಣವನ್ನು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಓದಿದರು. ಸಂದೇಶ ಪಠಣಾನಂತರ ಶ್ರೀಮಾನ್ ಶೇಷಾದ್ರಿಯವರು ಬಹಳ ಘನವಾದ ಆರಂಭ ಭಾಷಣ ಮಾಡಿದರು. ಅಧ್ಯಕ್ಷರಾದ ಶ್ರೀಶ್ರೀಗಳವರು ತದ್ಮೂಲ ಧೀರಗಂಭೀರವಾದ ವಾಣಿಯಿಂದ ವೇದ, ಉಪನಿಷತ್ತು, ಸಂಸ್ಕೃತ ಸಾಹಿತ್ಯದ ಮಹತ್ವದ ವಿಚಾರ— ಅಂದರೆ ಅದು ಅಮರರ (ದೇವತೆಗಳ) ಮತ್ತು ಅಮರ (ಸಾವಿಲ್ಲದ) ಭಾಷೆಯಾಗಿರುವುದು — ಸಕಲ ಶಾಸ್ತ್ರಗಳೂ ಆ ಭಾಷೆಯಲ್ಲಿ ರಚಿತವಾಗಿರುವುದು — ಜಗತ್ತಿಗೇ ಜ್ಞಾನದಾನ ಮಾಡಿದುದೂ ಆಗಿದೆ — ಇಂತಹ ಭಾಷೆಯನ್ನು ಮೃತಭಾಷೆ ಎಂದು ಕರೆಯುವುದು ಮಹಾಪರಾಧವೂ, ಲಾಂಛನಾಸ್ಪದವೂ ಆಗಿದೆ — ಜಗತ್ತಿನಲ್ಲಿ ಈ ಸಂಸ್ಕೃತ ಭಾಷಾ ಪ್ರಚಾರದ ಆವಶ್ಯಕತೆ, ಅದಕ್ಕಾಗಿ ದ್ವಾರಕಾದಲ್ಲಿ ಶ್ರೀ ದ್ವಾರಕಾಪೀಠ ವಿಶ್ವವಿದ್ಯಾಪೀಠವನ್ನು ತಾವು ಸ್ಥಾಪಿಸಲು ಕಾರ್ಯಾರಂಭ ಮಾಡಿದುದು — ಪಂಡಿತರು ವಿಶ್ವಶಾಂತಿಗಾಗಿಯೂ ಜಗತ್ತಿನ ಜ್ಞಾನ ಪ್ರಸಾರದ ಗಾಗಿಯೂ ಮಾಡಿರುವ ಮಹಾತ್ಯಾಗ, ಈಗಲೂ ಅವರು ಮಾಡಬೇಕಾದ ಕರ್ತವ್ಯ — ಸಕಲ ರಾಜಕೀಯ, ಧಾರ್ಮಿಕ ವಿಷಯಗಳಲ್ಲಿ ಪುನಸ್ಸಂಗ್ಗ ಬೇಕಾದ ಅವಶ್ಯಕತೆ — ಜನಗಳೂ ರಾಜರೂ ಸಹಾ ಪಂಡಿತರಿಗೆ ಕೊಡಬೇಕಾದ ಪ್ರೋತ್ಸಾಹ — ಇವುಗಳನ್ನು ತಿಳಿಸಿದರು.

ಕಾರ್ಯದರ್ಶಿಗಳು ಪರಿಚಿದನಂ ಗಂಧಪುಷ್ಪಹಾರ ಸಮರ್ಪಣೆಯಾಗಿ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು.

ಅಖಿಲ ಕರ್ಣಾಟಕ ತೃತೀಯ ಜ್ಯೋತಿಷಿಕ ಸಮ್ಮೇಳನ

ತಾ॥ 26 ರ ಸಪ್ತಮಿಯು ಬೆಳಿಗ್ಗೆ ಜ್ಯೋತಿಷಿಕ ಸಮ್ಮೇಳನವು ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರ ಸಾನ್ನಿಧ್ಯದಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರಾಧ್ಯಾಪಕರಾದ ಡಾ॥ ಸಿ. ಎಸ್ ಶ್ರೀನಿವಾಸ ಐಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು.

ಮಂಗಳಸ್ತವನಾನಂತರ ಕಾರ್ಯದರ್ಶಿ ಲಿಂಗಾಜೋಯಿಸರು ಕಳೆದ ಸಮ್ಮೇಳನಗಳ ವರದಿಯೋದಿದರು ಬಳಿಕ ಶ್ರೀನಿವಾಸಯ್ಯಂಗಾರ್ಯರು ಅಧ್ಯಕ್ಷ ಭಾಷಣ ಮೊದಲು, ಜಗದ್ಗುರುಗಳು ಜ್ಯೋತಿಶ್ಶಾಸ್ತ್ರದ ಹಿರಿಮೆ, ಪಾಶ್ಚಾತ್ಯ ಜ್ಯೋತಿಶ್ಶಾಸ್ತ್ರದಲ್ಲಿರುವ ನ್ಯೂನತೆ, ಭಾರತೀಯ ಜ್ಯೋತಿಶಾಸ್ತ್ರದಲ್ಲಿನ ಪೂರ್ಣತೆ ಮೆತ್ತು ಆಧ್ಯಾತ್ಮಿಕ ತತ್ವದಿಂದ ತುಂಬಿದ ಭಾರತೀಯ ಮಾಸಗಳ ವಿವರಣೆ ಮುಂತಾದ ವಿಷಯಗಳ ಮೇಲೆ ಗಂಭೀರವಾದ, ಉತ್ತಮ ಉಪದೇಶವನ್ನಿತ್ತರು. ಸಭಿಕರು ಜಗದ್ಗುರುಗಳ ಈ ಹಿರಿದಾದ ಪ್ರವಚನವನ್ನು ಕೊಂಡಾಡಿದರು.

ಇದೇ ದಿನ ಸಂಜೆ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ರಮಾಕೃಷ್ಣ ಶಾಸ್ತ್ರಿಗಳು 'ಭೀಷ್ಮ ಪ್ರತಿಜ್ಞೆ' ಹರಿಕಥೆ ಮಾಡಿದರು. ಅನಂತರ 'ಭಕ್ತಿ' ಯ ಮೇಲೆ ಜಗದ್ಗುರುಗಳವರ ಸುಂದರ ಭಾಷಣವಾಯಿತು. ಸಂಜೀವಯ್ಯನವರ ಲಾವಣಿ ಕಾರ್ಯದರ್ಶಿಗಳ ಅಭಿನಂದನೆಯೊಂದಿಗೆ ಸಂಜೆಯ ಸಭಾ ಸಮಾಪ್ತಿಯಾಯಿತು.

ಆಗಮತ್ರಯ ಸಮ್ಮೇಳನ

ಅಷ್ಟಮೀದಿನ (ತಾ॥ 27) ಬೆಳಿಗ್ಗೆ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಆಗಮತ್ರಯ ಸಮ್ಮೇಳನವು ಆರಂಭವಾಯಿತು. ಋಗ್ವೇದ, ಯಜುರ್ವೇದ, ಸಾಮವೇದಗಳಿಂದ ಮಂಗಳ ಸ್ತವನವಾದನಂತರ ಕಾರ್ಯದರ್ಶಿ ಕೇಶವ ಭಟ್ಟರು ಪ್ರಾಸ್ತಾವಿಕ ಭಾಷಣ ಮಾಡಿದರು. ಆಗಮತ್ರಯ – ಶೈವ ಪಾಂಚರಾತ್ರ, ವೈಖಾನಸಗಳ ಸ್ವರೂಪವನ್ನು ವಿವರಿಸಿದ, ಹಲವು ಪಂಡಿತರ ಭಾಷಣಗಳಾಗಲು, ಜಗದ್ಗುರುಗಳು ಸುಂದರ ಗಂಭೀರ ಶೈಲಿಯಲ್ಲಿ, ಮಾರ್ಮಿಕವಾಗಿ, ಯುಕ್ತಿಯುಕ್ತವಾಗಿ ಅಧ್ಯಕ್ಷ ಭಾಷಣ ಮಾಡಿದರು. ಧನ್ಯವಾದಾನಂತರ ಸಭಾ ಸಮಾಪ್ತಿಯಾಯಿತು.

ಸಂಜೆ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಜ್ಯೋತಿಷ ಸಮ್ಮೇಳನಾಂಗವಾಗಿ ಕೊ॥ ವೆಂಕಟಸುಬ್ಬಾಶಾಸ್ತ್ರಿಗಳು, ಮೊ. ಪದ್ಮನಾಭ ಅಡಿ, ಹು. ಅಮಭಟ್ಟರು, ಮೊ. ಭಾಸ್ಕರ ಅಡಿ, ಹು. ರಾಮ ಭಟ್ಟರು, ಮೊ. ಭಾಸ್ಕರ ಅಡಿ ಗಣಪತಿಶರ್ಮ ಹೆಗಡೆರ ಭಾಷಣಗಳಾಗಿ ಸಭಾ ವಿಸರ್ಜನೆಯಾಯಿತು.

ಅಖಿಲ ಕರ್ಣಾಟಕ ಸನಾತನ ಧರ್ಮ ಸಮ್ಮೇಳನ

ನವಮೀದಿನ (ತಾ 28) ಈ ಸಮ್ಮೇಳನವು ನಡೆಯಿತು. ಬೆಳಿಗ್ಗೆ 9 ಗಂಟೆಗೆ ಜಗದ್ಗುರುಗಳವರು ಕರ್ಣಾಟಕ ಸಂಘದ ಸಭಾ ಭವನಕ್ಕೆ ಚಿತ್ತೈಸಲು, ನೆರೆದ ಪಂಡಿತ ಮಂಡಳವು ಹಾರಪುಷ್ಪ ಬಾಜಗಳಿಂದ ಸ್ವಾಗತಿಸಿ, ವೇದಮಂತ್ರ ಘೋಷದೊಂದಿಗೆ ಒಳಗೆ ಕರೆದೊಯ್ದಿತು.

ವೇದಗಳ ಮಂಗಳಸ್ತವನಾನಂತರ ಎಸ್. ಶ್ಯಾಮಾಚಾರ್ಯರು ಸಂದೇಶಗಳನ್ನು ಓದಲು, ಬೆಂಗಳೂರಿನ ವೈದಿಕ ಧರ್ಮ ಸಹಾಯ ಸಂಘದ ಕಾರ್ಯದರ್ಶಿ ರಾಮಾಶಾಸ್ತ್ರಿಗಳು ತಮ್ಮ ಕಾರ್ಯವಂದಿಯೊಪ್ಪಿಸಿದರು. ಅ. ಭಾ. ಧರ್ಮ ಸಂಘದ ಸ್ವರೂಪ, ಕಾರ್ಯವಿವರವನ್ನು ಮಹಾಬಲ ಭಟ್ಟರು ಓದಲು, ಅಧ್ಯಕ್ಷ ಪದಾರೂಢರಾದ ಶ್ರೀ ಜಗದ್ಗುರುಗಳವರು ಭರತಖಂಡದಲ್ಲೀಗ ಧರ್ಮಕ್ಕಾಗಿ ಕೆಲಸ ಮಾಡುತ್ತಿರುವ ಕಾಶಿಯ ಭಾರತ ಧರ್ಮ ಮಂಡಲಿ, ವರ್ಣಾಶ್ರಮ ಸ್ವರಾಜ್ಯ ಸಂಘ, ಧರ್ಮ ಸಂಘಗಳ ಸ್ಥಿತಿಗತಿಗಳನ್ನು ವಿವರಿಸಿ, ಸನಾತನ ಧರ್ಮ ಸ್ವರೂಪ, ಮಹತ್ವ, ಅದರ ಈಗಿನ ಸ್ಥಿತಿ ಮತ್ತು ಪರಿಹಾರೋಪಾಯ ಮುಂತಾದ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ, ಹೃದಯಂಗಮವಾಗಿಯೂ ಸಮುದ್ಬೋಧಕರವಾಗಿಯೂ ಒಂದೂವರೆ ಗಂಟೆ ಕಾಲ ಭಾಷಣ ಮಾಡಿದರು.

ಬೆಳಿಗ್ಗಿನ ಕಾರ್ಯಕ್ರಮವು ಮುಗಿಯಲು ಪುನಃ ಮಧ್ಯಾಹ್ನ ಮೂರುವರೆಯಿಂದ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನದ ಕಾರ್ಯವು ಮುಂದುವರಿಯಿತು. ಅನೇಕ ವಿದ್ವಾಂಸರ ಅನುಮೋದನೆ ಸೂಚನೆಗಳಿಂದ ಒಂಭತ್ತು ಠರಾವುಗಳು ಸ್ವೀಕೃತವಾಗಿ ನಾಲ್ಕು ದಿನಗಳಿಂದ ನಡೆದ ಶಾಸ್ತ್ರಿಕ ಸಮ್ಮೇಳನಗಳ ಅಧ್ಯಕ್ಷತೆಯ ಉಪಸಂಹಾರ ಭಾಷಣವನ್ನು ಜಗದ್ಗುರುಗಳವರು ಅಪ್ಪಣೆ ಕೊಡಿಸಿದರು.

ರಾತ್ರಿ ಶೃಂಗೇರಿಯ ರಾಮಕೃಷ್ಣ ಶಾಸ್ತ್ರಿಗಳ ಹರಿಕಥೆಯೂ 'ವೇಣೀ ಸಂಹಾರ' ಸಂಸ್ಕೃತ ನಾಟಕದ ಪ್ರದರ್ಶನವೂ ನಡೆಯಿತು.

ಪಂಡಿತರ ಸನ್ಮಾನ

ತಾ॥ 29 ಮೇ. ದಶಮೀ ದಿನ ಬೆಳಿಗ್ಗೆ ಜಗದ್ಗುರುಗಳ ಸವಾರಿಯು ಆಂಜನೇಯ ದೇವಸ್ಥಾನಕ್ಕೆ ಚಿತ್ತೈಸಲು ಪಂಡಿತ ಮಂಡಳಿಯೂ, ಅರ್ಚಕರೂ ವೇದಘೋಷ ಪೂರ್ಣ ಕಲಶಗಳಿಂದ ಸ್ವಾಗತಿಸಿದರು. ಜಗದ್ಗುರುಗಳವರು ಪಂಡಿತರಲ್ಲಿ ಮುಖ್ಯವಾಗಿ 42 ಜನರಿಗೆ ವಿವಿಧ ಪದವಿಗಳನ್ನಿತ್ತುದಲ್ಲದೆ, ಎಲ್ಲರಿಗೂ ಫಲಮಂತ್ರಾಕ್ಷತೆ ಕೊಟ್ಟು ಅನುಗ್ರಹಿಸಿದರು.

ತಾ॥ 30, ಏಕಾದಶೀ ದಿನ ಬೆಳಿಗ್ಗೆ ಜಗದ್ಗುರುಗಳವರು ಮುಳುಬಾಗಿಲು ಮಠಕ್ಕೆ ಹಿಂದಿರುಗಿದರು.

ಅಖಿಲ ಕರ್ಣಾಟಕ ಸನಾತನ ಧರ್ಮ ಸಮ್ಮೇಳನದಲ್ಲಿ ಸ್ವೀಕೃತವಾದ ಗೊತ್ತುವಳಿಗಳು

1 ನಮ್ಮ ಶ್ರೀಮನ್ಮಹಾರಾಜಾ ಸರಕಾರದವರು ಅಧಾರ್ಮಿಕ ಶಾಸನಗಳಿಗೆ ಗವಕಾಶ ಕೊಡದೆ ಧರ್ಮದಿಂದಲೂ ನ್ಯಾಯದಿಂದಲೂ ರಾಜ್ಯಪರಿಪಾಲನೆ ಮಾಡುತ್ತಿರುವುದನ್ನು ಈ ಸಮ್ಮೇಳನವು ಅಭಿನಂದಿಸುವುದಲ್ಲದೆ ಮುಂದೂ ಹೀಗೇ ನಡೆಸಿಕೊಂಡು ಬರಬೇಕಾಗಿ ಕೋರುತ್ತದೆ.

ಪ್ರಸ್ತಾವಕ — ವಿದ್ವಾಂ ಸಂಪತ್ಕುಮಾರಾಚಾರ್ಯ ಮೇಲುಕೋಟೆ.

ಸಮರ್ಥಕ — 'ಸುಬೋಧ' ರಾಮರಾವ್ ಬೆಂಗಳೂರು.

2 ಮೈಸೂರು ರಾಜ್ಯದಲ್ಲಿ ಮುಂಬರುವ ರಾಜಕೀಯ ಸುಧಾರಣೆಯಲ್ಲಿ ಅಖಿಲ ಧರ್ಮ ಪೀಠಗಳು, ದೇವಾಲಯಗಳು, ಮತ್ತು ಸನಾತನಿಗಳ ಹಿತರಕ್ಷಣೆಗಾಗಿಯೂ, ಧಾರ್ಮಿಕ ಸ್ವಾತಂತ್ರ್ಯಕ್ಕಾಗಿಯೂ, ಅಖಿಲ ಕರ್ಣಾಟಕ ಸನಾತನಿಗಳ ಸಂಘದವರು ಮೈಸೂರು ದಿವಾನರಿಗೊಪ್ಪಿಸಿರುವ ಮನವಿಗೆ ಈ ಅಖಿಲ ಕರ್ಣಾಟಕ ಸನಾತನ ಧರ್ಮ ಸಮ್ಮೇಳನವು ಸಹಾನುಭೂತಿಯನ್ನು ಪ್ರದರ್ಶಿಸುವುದಲ್ಲದೆ ಈ ಮನವಿಯನ್ನೊಪ್ಪಿ ಅದರಂತೆ ನಡೆಸಬೇಕಾಗಿ ಶ್ರೀ ಮನ್ಮಹಾರಾಜಾ ಸರ್ಕಾರದವರನ್ನು ಕೇಳಿಕೊಳ್ಳುತ್ತದೆ.

ಪ್ರಸ್ತಾವಕ — ಗಮಕಿ ರಾಮಕೃಷ್ಣ ಶಾಸ್ತ್ರಿ ಬೆಂಗಳೂರು

ಸಮರ್ಥಕ — ಕುಪ್ಪಂ ರಾಘವಾ ಶಾಸ್ತ್ರಿ, ವೈದಿಕ ಧರ್ಮಸಂಘ, ಬೆಂ.

3 ಅಖಿಲ ಭಾರತ ವರ್ಷೀಯ ಧರ್ಮ ಸಂಘದ ಸ್ಥಾಪಕರಾದ ಶ್ರೀ ಕರಪಾತ್ರೀ ಸ್ವಾಮಿಗಳೇ ಮುಂತಾದವರನ್ನು ಕೇಂದ್ರ ಸರ್ಕಾರವು ಬಂಧಿಸಿರುವುದನ್ನು ಈ ಸಮ್ಮೇಳನವು ತೀವ್ರವಾಗಿ ವಿರೋಧಿಸುವುದಲ್ಲದೆ, ಧರ್ಮ ಯುದ್ಧ ಸತ್ಯಾಗ್ರಹದ ಇವರ ಐದು ಬೇಡಿಕೆಗಳನ್ನು ಕೂಡಲೇ ಒಪ್ಪಬೇಕಾಗಿ ಒತ್ತಾಯಪಡಿಸುತ್ತದೆ.

ಪ್ರಸ್ತಾವಕ — ವೇದಾಂತ ವಿದ್ವಾನ್ ವೆಂಕಟರಮಣ ಶಾಸ್ತ್ರೀ, ಕರ್ಕಿ.

ಸಮರ್ಥಕ — ಗಣಪತಿ ಶಂಕರ ಭಟ್ಟ ಸರ್ಪಕಣ್ಯೇಶ್ವರ, ಹೊನ್ನಾವರ.

4 ಮದ್ರಾಸ್ ಬೊಂಬಾಯಿ ಮುಂತಾದ ಸರಕಾರಗಳು ಸನಾತನಿಗಳ ಧರ್ಮ ಪೀಠ ಸ್ಥಾನಗಳ ಅಭಿಪ್ರಾಯವರಿಯದೆ ಹೊಸ ಹೊಸದಾದ ಅಧಾರ್ಮಿಕ ಶಾಸನಗಳನ್ನು ತರುತ್ತಿರುವುದನ್ನು ಈ ಸಮ್ಮೇಳನವು ಖಂಡಿಸುವುದಲ್ಲದೆ ಅಂತಹ ಕಾನೂನುಗಳನ್ನು ಹಿಂತೆಗೆದು ಕೊಳ್ಳಬೇಕಾಗಿ ಒತ್ತಾಯ ಪಡಿಸುತ್ತದೆ.

ಪ್ರಸ್ತಾವಕ — ಪಂ ಬಾಲಚಂದ್ರ ಶಾಸ್ತ್ರೀ ಧಾರವಾಡ.

ಸಮರ್ಥಕ — ಶೃಂಗೇಶ್ವರ ಶಾಸ್ತ್ರಿ ಶೃಂಗೇರಿ.

ಧರ್ಮವು ಹಿಂದೂಗಳಿಗೆ ಜೀವನವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಇದರ ಮೇಲೆ ಬರುತ್ತಿರುವ ಭಯಂಕರ ಆಕ್ರಮಣ, ಆಘಾತಗಳನ್ನು ಎದುರಿಸಲು ಸತತ ಪ್ರಯತ್ನ ಮಾಡುತ್ತಿರುವ ಕಾರಣ ಅಖಿಲ ಭಾರತವರ್ಷೀಯ ಧರ್ಮ ಸಂಘ ಮತ್ತದರ ಅಂಗವಾದ ಧರ್ಮವೀರ ದಳದ ಶಾಖೆಯನ್ನು ಕನ್ನಡ ನಾಡಿನಲ್ಲೆಲ್ಲಾ ತೆರೆಯುವುದು ಅಗತ್ಯವೆಂದೂ ಸನಾತನಿಗಳೆಲ್ಲರೂ ಕೂಡಲೇ ಈ ಕಾರ್ಯಕ್ಕೆ ಪ್ರಯತ್ನಿಸಬೇಕೆಂದೂ ಈ ಸಮ್ಮೇಳನವು ಕೋರುತ್ತದೆ.

ಪ್ರಸ್ತಾಪಕ — ಪಂ|| ಗೋಪಾಲ ಅಯ್ಯಂಗಾರ್, ಮೇಲುಕೋಟೆ.

ಸಮರ್ಥಕ — ಪಂ ಕೃಷ್ಣಮಾಚಾರ್ಯ, ಬೆಂಗಳೂರು.

6 ಕರ್ಣಾಟಕ ದೇಶದಲ್ಲಿ ಧರ್ಮ ಪ್ರಚಾರಕ್ಕಾಗಿ ಸರಿಯಾದ ಪತ್ರಿಕೆಯಿಲ್ಲದಿರುವುದರಿಂದ ಟ್ಟಿಕೂಡಲೇ ಒಂದು ಯೋಗ್ಯವಾದ ದೈನಿಕ ಅಥವಾ ವಾರ ಪತ್ರಿಕೆಯನ್ನು ಆರಂಭಿಸಲೆತ್ನಿಸಬೇಕೆಂದೂ, ಅನೇಕ ವರ್ಷಗಳಿಂದ ಧರ್ಮ ಪ್ರಚಾರಗೈಯುತ್ತಿರುವ ಮೈಸೂರಿನ 'ಸತ್ಯವಾದಿ' ವಾರ ಪತ್ರಿಕೆಗೆ ಸಮಸ್ತರೂ ಗ್ರಾಹಕರಾಗಿ ಬೆಂಬಲ ನೀಡಬೇಕೆಂದೂ ಈ ಸಮ್ಮೇಳನವು ಆಗ್ರಹದಿಂದ ತಿಳಿಸುತ್ತದೆ.

ಪ್ರಸ್ತಾವಕ — ಗಣಪತಿ ಶಂಕರ ಭಟ್ಟ, ಸರ್ಪಕಣ್ಯೇಶ್ವರ, ಬೆ ಹೊನ್ನಾವರ.

ಅನುಮೋದಕ— ಆಗಮಿಕ ಕೃಷ್ಣ ದೀಕ್ಷಿತ, ಹೆಂಗಳೂರು.

ಸಮರ್ಥಕ— ಸುಬ್ರಹ್ಮಣ್ಯ ಜೋಯಿಸ, ಬೆಂಗಳೂರು.

7 ಸರ್ 1927 ನೇ ಇಸವಿಯ ನಂ 2 ನೇ ಮದರಾಸು ಎಂಡೋಮೆಂಟ್ಸ್ ಆಕ್ಟನ್ನೂ ಆಮೇಲೆ ಬಂದ ತಿದ್ದುಪಡಿಗಳನ್ನೂ, ಮದ್ರಾಸು ಪ್ರಾಂತ್ಯದ ಮಠಗಳಿಗೆ ಅನ್ವಯಿಸಿರುವುದರಿಂದ ಹಿಂದೂ ಮಠದ ಮೇಲೆ ದೊಡ್ಡ ಆಘಾತವಾಗಿರುವುದಲ್ಲದೆ ಅವುಗಳು ಹಿಂದೂಮತದ ತತ್ವಗಳಿಗೂ, ನಿಯಮಗಳಿಗೂ, ಪದ್ಧತಿಗಳಿಗೂ, ಸಂಪ್ರದಾಯಗಳಿಗೂ ಕೇವಲ ವಿರುದ್ಧವಾಗಿರುತ್ತವೆಂದೂ, ಶ್ರೀ ಗುರು ಪೀಠಗಳ ಅಸ್ತಿತ್ವಕ್ಕೇನೇ ನಾಶತರುವಂಥವೆಂದೂ ಈ ಸಮ್ಮೇಳನವು ಶನ್ನ ವಿಮರ್ಶಪೂರ್ವಕವಾದ ಏಕಾಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಹಾಗೆ ಆ ನಿಯಮಗಳು ಶ್ರೀಮಠಗಳ ಸ್ವಾತಂತ್ರಾ ವಿಕ ಅಭಿವೃದ್ಧಿಗೆ ತಡಯುಂಟುಮಾಡುತ್ತಿರುವುದರಿಂದಲೂ, ಮದರಾಧಿಪತಿಗಳ ಕ್ರಮಾಗತ ಹಕ್ಕುಬಾಧ್ಯತೆಗಳನ್ನು ಕೆಲ್ಲೊಗೆಯುವಂಥವುಗಳಾಗಿರುವುದರಿಂದಲೂ ಶ್ರೀಮಠಗಳ ಕರ್ತವ್ಯಗಳನ್ನು ಪೂರೈಸಲು ವಿಘ್ನಕಾರಿಗಳಾಗಿಯೂ ಇರುವುದರಿಂದ ಅಂಥವುಗಳನ್ನು ಮದರಾಸು ಸರಕಾರವು ಎಂಡೋಮೆಂಟ್ಸ್ ಬೋರ್ಡಿನ ಮೂಲಕ ಜಾರಿಗೆ ತರುತ್ತಿರುವುದು ಕೇವಲ ಬಲಾತ್ಕಾರವಾದ್ದಲ್ಲದೆ ಮದರಾಧಿಪತಿಗಳ ಸಹಕಾರದಿಂದಲ್ಲವಾದ್ದರಿಂದ ಈ ನಿಯಮಗಳನ್ನು ಪೀಠ ಸ್ವಾಮಿಗಳಿಗೆ ಅನ್ವಯಿಸುವಷ್ಟರ ಮಟ್ಟಿಗಾದರೂ ಕೂಡಲೇ ರದ್ದುಪಡಿಸಬೇಕೆಂದು ಈ ಸಮ್ಮೇಳನವು ವೈಸ್ರಾಯ್ ಸರಕಾರವನ್ನು ಆಗ್ರಹ ಪೂರ್ವಕವಾಗಿ ಕೇಳಿಕೊಳ್ಳುತ್ತದೆ.

ಪ್ರಸ್ತಾಪಕ — ವಿ. ಅನಂತ ಕೃಷ್ಣಾಚಾರ್ಯ, ಉಡುಪಿ.

ಸಮರ್ಥಕ — ವಿದ್ವಾಂ ಸಂಪತ್ಕುಮಾರಾಚಾರ್ಯ, ಮೇಲುಕೋಟೆ.

8 ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟ ಹಿಂದೂಮತೀಯರನ್ನು ಸಮುಚಿತ ಪ್ರಾಯಶ್ಚಿತ್ತದಿಂದ ಶುದ್ಧಿಗೊಳಿಸಿ, ಪುನಃ ಹಿಂದೂಮತದೊಳಗೆ ಸೇರಿಸಿ, ಅವರೊಂದಿಗೆ ಸಮ್ಯವಹಾರ ಮಾಡುವುದು ಧರ್ಮ ಶಾಸ್ತ್ರಾಭಿಮತವೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ ವಿತ್ತು ಘೋಷಿಸುತ್ತದೆ

ಪ್ರಸ್ತಾವಕ — ವಿದ್ವಾಂ ಕೃಷ್ಣ ಮಾಚಾರ್ಯ, ಬೆಂಗಳೂರು.

ಸಮರ್ಥಕ — ವಿದ್ವಾಂ ಅನಂತಾಚಾರ್ಯ ಬೆಂಗಳೂರು.

ಯಾವುದೇ ಸರಕಾರವೂ ಧರ್ಮ ವಿಷಯಕವಾದ ಯಾವುದೇ ನಿಬಂಧನೆಯನ್ನೂ ಪೀಠಾಧಿಪತಿಗಳ ಅಭಿಮತ ತೆಗೆದುಕೊಳ್ಳದೆ ಮಾಡಕೂಡದೆಂದು ಅಖಿಲ ಭಾರತದ ಎಲ್ಲಾ ಪೀಠಾಧಿಪತಿಗಳೂ ಘೋಷಿಸಿ ಸರಕಾರಕ್ಕೆ ತಿಳಿಸಬೇಕೆಂದು ಈ ಸಮ್ಮೇಳನವು ಕೋರುತ್ತದೆ.

ಪ್ರಸ್ತಾವಕ — ವಿದ್ವಾಂ ಕೃಷ್ಣ ಪೂಜಾಚಾರ್ಯ, ಬೆಂಗಳೂರು.

ಸಮರ್ಥಕ — ವಿದ್ವಾಂ ಶ್ರೀನಿವಾಸಾಚಾರ್ಯ ಬೆಂಗಳೂರು.

ಸಮ್ಮೇಳನಗಳಿಗೆ ಬಂದ ಶುಭ ಸಂದೇಶಗಳು

(ಕೊಂಚೀ ವೊಲಕ)

1 ಪುರಿಯ ಜಗದ್ಗುರು, ಬೊಂಬಾಯಿ

2 ವ್ಯಾಸರಾಯ ಮಠದ ಸ್ವಾಮಿಗಳು ಸೋಸ್ಲೆ

3 ಭಾರತ ಧರ್ಮ ಮಹಾಮಂಡಲ ಕಾಶೀ

4 ರಾವ್‌ಸಾಹೇಬ್ ಎಂ. ಎಂ. ದ್ವಿವೇದಿ, ವಿದ್ಯಾಭ್ಯಾಪ ಇಲಾಖೆಯ ಡೈರೆಕ್ಟರ್, ಕಚ್ಚ ಸ್ಟೇಟ್,

5 ಶೇಠ್ ದೇವಿದಾಸ ಮಾಧವ ಜೀ ಠಾಕರ್ಸಿ, ಜೆ. ಪಿ. ಬೊಂಬಾಯಿ

6 ಶೇಠ್ ಭಗವಾನದಾಸ ರಾವು ಜೀ ಜೆ. ಪಿ. ಬೊಂಬಾಯಿ

7 ನೋತೀಲಾಲರಾಯ ಪ್ರವರ್ತಕ ಸಂಘ ಸ್ಥಾಪಕ ಚಿತ್ತಗಾಂಗ್,

8 ಮಹಾಶಂಕರ ಜಾನೀ, ವಕೀಲ್, ಈಡರ ಸ್ಟೇಟ್

9 ಗುರುರಾಜಾಚಾರ್ಯ, ಕಾರ್ಯದರ್ಶಿ ಅಖಿಲ ಕರ್ಣಾಟಕ ಸನಾತನ ಸಂಘ, ಮಂತ್ರಾಲಯ.

10 ಕೃಷ್ಣರಾವ್, ಸಂಪಾದಕ ಸತ್ಯವಾದಿ ಮೈಸೂರು.

11 ರಾಮಸ್ವಾಮಿ ಸೆಂಚುರಿ ಬ್ಯಾಂಕು, ಬೆಂಗಳೂರು.

12 ವ್ರಜಲಾಲ್ ಉಪಾಧ್ಯಾಯ ದ್ವಾರಕಾ

13 ದುರ್ಗಾಶಂಕರ ದವೆ, ಪ್ರಾಂತ ಶಾಲಾಧಿಕಾರೀ ದ್ವಾರಕೆ

ಇದಲ್ಲದೆ ಉಡುಪಿ ಅಷ್ಟ ಮಠಗಳಿಂದಲೂ ಹರಿಹರಪುರ ಮಠದಿಂದಲೂ ಶ್ರೀಮುಖ ಬಂದಿರುವುವು. ಕೆಳಗಿನವರ ಸಂದೇಶ ಪತ್ರಗಳೂ ಬಂದಿವೆ

1 ಶ್ರೀ ಭಾಷ್ಯಸ್ವಾಮಿಗಳು ಮೆಹಾದಾನಪುರ

2 ಶ್ರೀ ಶ್ರೀ ವಿದ್ಯಾನಂದರು, ಗೀತಾಮಂದಿರ ಸ್ಥಾಪಕ ಅಮದಾಬಾದ

3 ಮಹಾರಾಜರು, ಧರ್ಮಪುರ

4 ಸೆಕ್ರಿಟರಿ, ಶಂಕರಮಠ ಬೊಂಬಾಯಿ

5 N. ದಾಂಡೇಕರ್, ಎಂ. ಎ. ಪಿಹೆಚ್. ಡಿ, ಸೆಕ್ರಿಟರಿ, ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪೂನಾ

6 ರತ್ನೇಶ್ವರ ಕರಾಚಿ

7 ಲಕ್ಷ್ಮೀನಾಥ ಶಾಸ್ತ್ರೀ B.A ಪ್ರಿನ್ಸಿಪಾಲ್, ರಾಜಕೀಯ ಸಂಸ್ಕೃತ ಕಾಲೇಜು ಬರೋಡ

8 ಲಾಳರಂಗರಾಯ ಓದುತ್ತ, ಸಂಪಾದಕ, ಸಾಧನಾ, ರಾಜಕೋಟೆ.

9 ವಾಸುದೇವಶಾಸ್ತ್ರೀ ಅಮದಾಬಾದು

10 ಆಲೂರ ವೆಂಕಟರಾಯರು ಧಾರವಾಡ.

11 ರಾಜಮಂತ್ರ ಪ್ರವೀಣ A.V. ರಾಮನಾಥಕರವರು ಬೆಂಗಳೂರು.

13 C.K. ವೆಂಕಟರಾವ್ಯೈಯ್ಯ ಬೆಂಗಳೂರು

13 H. ಚನ್ನಕೇಶವಯ್ಯಂಗಾರ್ಯರು ಮೈಸೂರು

14 ಬಾಳೆಕುದುರು ಮಠದ ಏಜೆಂಟರು.

---

* ಶ್ರೀ ಜಗದ್ಗುರುಗಳಿಂದ ಪದವಿಗಳನ್ನು ಪಡೆದವರ ಪಟ್ಟಿಯು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು.

Edited, Printed and Published by M. S. Krishna Rao at the Satyvadi Press Chamara Agrahar, Mysore.